**<u>ದಿನಾಂಕಃ 01.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ. ಆರ್ ವಿ ಕೆ ವಕೀಲರಿಂದಃ-</u>

ನಾನು 5 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ತಮ್ಮ ದಾವಾ ಪತ್ರದಲ್ಲಿ ಇರುವ ಅಂಶಗಳನ್ನು ಓದಿಸಿ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದು ಹೇಳಿದ್ದು ಖರಿದಿ ಮಾಡುವ ಕಾಲಕ್ಕೆ ಮೂಲ ದಾಖಲಾತಿಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮೂಲ ದಾಖಲೆಗಳನ್ನು ಮಂಜುನಾಥ್ ಎಂಬುವವರಿಂದ ಪಡೆದು ನೋಡಿರುತ್ತೇನೆ. ಮಾಲ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ತಮಗೆ ಕ್ರಯಕ್ಕೆ ನೀಡಿದ ಮಂಜುನಾಥ್ ರವರು ಯಾರಿಂದ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯನ್ನು ಖರೀದಿಸುವ ಕಾಲಕ್ಕೆ ದಾವಾ ಆಸ್ತಿಯ ನಕ್ಷೆ ತಯಾರಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಹೌದು ಎನ್ನುತ್ತಾರೆ. ನಾನು ನಕ್ಷೆಯನ್ನು ಹಾಜರುಮಾಡದೇ ಇದ್ದರೂ ಹಾಜರು ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಸರ್ವೆ ನಂ.542 ಆಸ್ತಿಯಿಂದ ಆದಂತಹ ಆಸ್ತಿ ಎಂದರೆ ಸರಿ. ಸರ್ವೆ ನಂ.542 ರ ಆಸ್ತಿಯು ಮೂಾಲ ಯಾರಿಗೆ ಸೇರಿದ್ದು ಎಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ ಎಂದು ನುಡಿದು, ನಾನು ಮಂಜುನಾಥ್ ರವರಿಂದ ಖರಿದಿ ಮಾಡಿರುತ್ತೇನೆ ಎನ್ನುತ್ತಾರೆ.

ಸರ್ವೆ ನಂ.542 ರ ಆಸ್ತಿ ಮೂಲ ಯಲಗಯ್ಯರವರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.542 ವಿಸ್ತೀರ್ಣ 1 ಎಕರೆ 24 ಗುಂಟೆ ಪೈಕಿ 15 ಗುಂಟೆ ಜಮೀನನ್ನು 1 ರಿಂದ 3 ನೇ ಪ್ರತಿವಾದಿಯರ ತಂದೆ 1970 ರಲ್ಲಿ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ಆಸ್ತಿಯಲ್ಲಿ ಇನ್ನುಳಿಕೆ 1 ಎಕರೆ 9 ಗುಂಟೆ ಜಮೀನು 1

ರಿಂದ 3 ನೇ ಪ್ರತಿವಾದಿಯರ ತಂದೆ ಹೆಸರಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ 1 ಎಕರೆ 24 ಗುಂಟೆ ಜಮೀನಿಗೆ ಕೂಡಾ 1 ರಿಂದ 3 ನೇ ಪ್ರತಿವಾದಿಯರ ತಂದೆ ವೆಂಕಟದಾಸಯ್ಯರವರ ಹೆಸರಿಗೆ ಖಾತೆ ನಮೂದಾಗುತ್ತಾ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ.

1 ರಿಂದ 3 ನೇ ಪ್ರತಿವಾದಿಯರ ತಂದೆ ವೆಂಕಟದಾಸಯ್ಯರವರ ಮರಣಾನಂತರ 1 ರಿಂದ 3 ನೇ ಪ್ರತಿವಾದಿಯರು ಮತ್ತು ಅವರ ತಾಯಿ ಚನ್ನಮ್ಮ ಸದರಿ 1 ಎಕರೆ 24 ಗುಂಟೆ ಪೈಕಿ 15 ಗುಂಟೆ ಶ್ರೀಕಂಠಯ್ಯರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 15 ಗುಂಟೆ ಮಾರಾಟ ಮಾಡಿದ ನಂತರ ಉಳಿದ 1 ಎಕರೆ 9 ಗುಂಟೆ ಜಮೀನನು 1 ರಿಂದ 3 ನೇ ಪ್ರತಿವಾದಿ ಮತ್ತು ಇನ್ನೊಬ್ಬ ಸಹೋದರ ತಲಾ 7 ಗುಂಟೆ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ರಿಂದ 3 ನೇ ಪ್ರತಿವಾದಿ ಮತ್ತು ಇನ್ನೊಬ್ಬ ಸಹೋದರ ತಮ್ಮ ಪಾಲಿಗೆ ಬಂದ 7 ಗುಂಟೆ ಜಮೀನನ್ನು ಜಿಲ್ಲಾಧಿಕಾರಿಯವರಿಂದ ಭೂ ಪರಿವರ್ತನೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಭೂ ಪರಿವರ್ತನೆ ಮಾಡಿಕೊಂಡಿರುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ಆದೇಶ ಪ್ರತಿ ಹಾಜರು ಪಡಿಸಿಲ್ಲ ಎಂದರೆ ಸರಿ. ತಾವು ಖರೀದಿ ಮಾಡಿದ ಆಸ್ತಿಯು ಯಾವ ಪ್ರತಿವಾದಿಯ ಭಾಗಕ್ಕೆ ಬಂದ 7 ಗುಂಟೆ ಜಾಗದ ಪೈಕಿ ಬಂದಿರುತ್ತದೆ ಎಂದು ಹೇಳುವಿರಾ ಎಂದರೆ ಸಾಕ್ಷಿ ಮೌನ ಇರುತ್ತಾರೆ. ಭೂ ಪರಿವರ್ತನೆ ಆದೇಶದಲ್ಲಿ ಕೆಲವು ಷರತ್ತುಗಳನ್ನು ವಿಧಿಸಿರುವ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಭೂ ಪರಿವರ್ತನೆ ಆದೇಶದಲ್ಲಿ ಅನ್ಯರಿಗೆ ಮಾರಾಟ ಮಾಡವುದಾಗಲೀ ಪರಭಾರೆ ಮಾಡುವುದಾಗಲಿ ಮಾಡುವಂತಿಲ್ಲ ಎಂದು ಷರತ್ತು ಇದೆ ಎಂದರೆ ನನಗೆ ಗೊತ್ತಿಲ್ಲ. ಭೂ ಪರಿವರ್ತನೆ ಮಾಡಿಕೊಂಡ ನಂತರ ಬೇರೆಯವರಿಗೆ ಮಾರಾಟ ಮಾಡಬೇಕಾದರೆ ಸರ್ಕಾರದ ಪರವಾನಗಿ ಬೇಕು ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ.

ನಾನು ಖರೀದಿ ಮಾಡಿರುವ ಆಸ್ತಿಯು 7 ಗುಂಟೆ ಆಸ್ತಿಯ ವ್ಯಾಪ್ತಿಯಲ್ಲಿ ಇದ್ದು ಆ 7 ಗುಂಟೆಗೆ ಚೆಕ್ಕು ಬಂದಿ ಹೇಳುವಿರಾ ಎಂದರೆ ಸಾಕ್ಷಿ ಮೌನ ಇರುತ್ತಾರೆ. ಮಂಜುನಾಥ್ ರವರು ಎಷ್ಟನೇ ನಂಬರ್ ಸೈಟನ್ನು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ನಾನಾಗಲೀ ಮಂಜುನಾಥ್ ರವರಾಗಲೀ ದಾವಾ ಆಸ್ತಿಯಲ್ಲಿ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿರುವ 7 ಗುಂಟೆ ಆಸ್ತಿಯ ಭೂ ಪರವರ್ತನೆ ಅಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಅಕ್ರಮವಾಗಿ ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿಯಲ್ಲಿ ಪೊಲೀಸ್ ರಕ್ಷಣೆ ಕೋರಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯನ್ನು ನ್ಯಾಯಾಲಯವು ಪುರಸ್ಕೃತ ಮಾಡಿದ್ದು, ನಂತರ ನಾನು ದಾವಾ ಆಸ್ತಿಯ ಸುತ್ತಾ ತಂತಿ ಬೇಲಿ ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕು ಬಂದಿ ಹೇಳುವಿರಾ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ.

**ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲನ್ನು ಮದ್ಯಾಹ್ನದ ಅವಧಿಯಲ್ಲಿ ಮಾಡುವುದಾಗಿ ಸಮಯ ಕೋರಿದ್ದು ನೀಡಲಾಯಿತು.**

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ

**ಮುಂದುವರಿದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ. ಆರ್ ವಿ ಕೆ ವಕೀಲರಿಂದಃ-**

**ಮದ್ಯಾಹ್ನ 2.45 ರ ನಂತರ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ದಾವಾ ಆಸ್ತಿಯನ್ನು ಮಂಜುನಾಥ್ ರವರಿಂದ ಖರೀದಿ ಮಾಡಿರುತ್ತೇನೆ ಎಂದು ತಾವು ಹೇಳಿದ್ದು ತಿಟ್ಟಮಾರನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಅವರ ಹೆಸರಿಗೆ ದಾವಾ ಆಸ್ತಿಯ ಖಾತೆ ಇತ್ತಾ ಎಂದರೆ ಸಾಕ್ಷಿ ಇತ್ತು ಎನ್ನುತ್ತಾರೆ. ಅವರ ಹೆಸರಿಗೆ ಖಾತೆ ಇದ್ದ ಬಗ್ಗೆ

ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಹಾಜರು ಮಾಡದೇ ಇದ್ದರೂ ಹಾಜರುಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ಎಕರೆ 9 ಗುಂಟೆ ಸ್ವತ್ತಿನಲ್ಲಿ ಪ್ರತಿವಾದಿ 1 ರಿಂದ 3 ಮತ್ತು ಅವರ ಸಹೋದರರು ತಲಾ 7 ಗುಂಟೆಯಂತೆ ಒಟ್ಟು 28 ಗುಂಟೆಯನ್ನು ವಿಭಾಗ ಮಾಡಿಕೊಂಡ ನಂತರ ಇನ್ನುಳಿಕೆ 21 ಗುಂಟೆ ಜಮೀನು ಮೂಲ ಖಾತೆದಾರರ ಹೆಸರಿಗೆ ಖಾತೆ ಇಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಇನ್ನುಳಿಕೆ 21 ಗುಂಟೆ ಜಮೀನನ್ನು ತನ್ನ ಹೆಸರಿಗೆ ಪೌತಿ ಮೇಲೆ ಖಾತೆ ಮಾಡಿಕೊಡುವಂತೆ ಪ್ರತಿವಾದಿ 1 ರಿಂದ 3 ರವರ ತಾಯಿ ತಾಲ್ಲೂಕು ದಂಡಾಧಿಕಾರಿ ಕಛೇರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನಂತರ ಚನ್ನಮ್ಮ ರವರ ಮಗಳು ಮದ್ದೂರಮ್ಮ ಅಲಿಯಾಸ್ ಮಹಾಲಕ್ಷ್ಮಿ ರಾಮನಗರ ಉಪವಿಭಾಗಧಿಕಾರಿ ಕಛೇರಿಯಲ್ಲಿ ಆರ್ ಎ 240/2021-2022 ಎಂದು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರ್ ಎ 240/2021-2022 ನ್ನು ಉಪವಿಭಾಗಧಿಕಾರಿರವರು ಪುರಸ್ಕೃತ ಮಾಡಿ ತಹಶೀಲ್ದಾರ್ ಚನ್ನಪಟ್ಟಣ ಇವರಿಗೆ ಸ್ಥಳ ಪರಿಶೀಲನೆ ಮಾಡಿ ನಕ್ಷೆ ತಯಾರಿಸಿ 1 ರಿಂದ 3 ನೇ ಪ್ರತಿವಾದಿಯವರ ತಾಯಿ ಚನ್ನಮ್ಮ ರವರ ಹೆಸರಿಗೆ ಖಾತೆ ಮಾಡುವಂತೆ ಆದೇಶ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಆದೇಶದಂತೆ ತಹಶೀಲ್ದಾರ್ ಚನ್ನಪಟ್ಟಣ ಇವರು ಸ್ಥಳ ಪರಿಶೀಲನೆ ಮಾಡಿ ನಕ್ಷೆ ತಯಾರಿಸಿ 1 ರಿಂದ 3 ನೇ ಪ್ರತಿವಾದಿಯವರ ತಾಯಿ ಚನ್ನಮ್ಮ ರವರ ಹೆಸರಿಗೆ ಖಾತೆ 19 ಗುಂಟೆ ಜಾಗವನ್ನು ಖಾತೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ಖಾತೆ ಮಾಡಿರುತ್ತಾರೆ ಎನ್ನುತ್ತಾರೆ. ತಹಶೀಲ್ದಾರರು ಮಾಡಿದ ಎಂ.ಆರ್.ನಂಬರ್ 75/2021-2022 ಪ್ರಶ್ನಿಸಿ ಉಪವಿಭಾಗಾಧಿಕಾರಿರವರ ಮುಂದೆ ನಾನು ಮತ್ತು ಇನ್ನಿತರರು ಅಪೀಲು ಮಾಡಿದ್ದೆವು ಎಂದರೆ ಸರಿ. ನಾವು ಸಲ್ಲಿಸಿದ್ದ ಆರ್.ಎ.1818/2022-2023 ನ್ನು ಉಪವಿಭಾಗಾಧಿಕಾರಿ ರವರು ವಜಾ ಮಾಡಿದ್ದರು ಎಂದರೆ ಸರಿ. ಉಪವಿಭಾಗಾಧಿಕಾರಿರವರ ಆದೇಶವನ್ನು ಪ್ರಶ್ನಿಸಿ ಯಾವುದೇ ಅಪೀಲು ಮಾಡಿಲ್ಲ ಎಂದರೆ ಸರಿ. 28 ಗುಂಟೆ ಪಶ್ಚಿಮ ದಿಕ್ಕಿಗೆ 1 ರಿಂದ 3 ನೇ ಪ್ರತಿವಾದಿಯವರ ತಾಯಿ ಚನ್ನಮ್ಮ ಹೆಸರಿಗೆ ಇರುವ 19 ಗುಂಟೆ ಜಾಗದಲ್ಲಿ ನಾನು ದಾವೆಯನ್ನು ಮಾಡಿ ಸ್ವಾಧೀನ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿರುವ ದಾವಾ ಆಸ್ತಿಗೂ ಮತ್ತು ಅನ್ಯಕ್ರಾಂತ ಆಗಿರುವ ಆಸ್ತಿಗೂ ಸಂಬಂಧ ಇಲ್ಲ ಎಂದರೆ

ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯನ್ನು ಮಂಜುನಾಥ್ ರವರಿಗೆ ಶ್ರೀಮತಿ ಮುಕ್ಕಮಾಳ್ ರವರು ಮಾರಾಟ ಮಾಡಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ಸರಿ. 3 ನೇ ಪ್ರತಿವಾದಿಯ ಹೆಸರಿಗೆ ಭೂ ಪರಿವರ್ತನೆ ಆದ 7 ಗುಂಟೆ ಜಾಗದಲ್ಲಿ ಮುಕ್ ಬಾಳ್ ಆಗಲೀ, ಮಂಜುನಾಥ್ ರವರ ಹೆಸರಿಗೆ  ಆಗಲೀ ಭೂ ಪರಿವರ್ತನೆ ಆಗಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಹೆಸರಿಗೆ ಭೂ ಪರಿವರ್ತನೆ ಆದ 7 ಗುಂಟೆ ಜಾಗದಲ್ಲಿ 5 ನಿವೇಶನಗಳನ್ನಾಗಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ತಮ್ಮ ನಿವೇಶನಗಳಿಗೆ ಏನು ಚೆಕ್ಕು ಬಂದಿಯನ್ನು ನಮೂದು ಮಾಡಿರುತ್ತಾರೆ ಎಂದು ಪಂಚಾಯಿತಿ ದಾಖಲೆಯನ್ನು ನೀವು ನೋಡಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರತಿವಾದಿಗಳು ಪರಿಶಿಷ್ಟ ವರ್ಗಕ್ಕೆ ಸೇರಿದ್ದು,  ಅವರ ವಿರುದ್ಧ ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ನಾನು ತಿಟ್ಟಮಾರನಹಳ್ಳಿ ಗ್ರಾಮ ಪಂಚಾಯಿತಿ ಅಧಿಕಾರಿಗಳು ಮತ್ತು ಪಟ್ಟಣ ಪಂಚಾಯಿತಿ ಅಧಿಕಾರಿಗಳ ಜೊತೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ